**ಯಲ್ಲಿ ಧರ್ಮವಂತಿ ಅವರ ಎರಡು ಕವಿತೆಗಳು**

# ನಾಯಿಗೆ ಬಿದ್ದ ಕನಸು

ಬರ ಪೀಡಿತ ಸೆಪ್ಟೆಂಬರ್
ಸ್ವಾಗತಿಸುತಿದೆ ಆಗ್ನೇಯ ದಿಕ್ಕಿನಿಂದ ಬೀಸುವ ಗಾಳಿ

ಒಣಗಿದ ಭತ್ತದ ಗದ್ದೆಗಳು
ಬಲಿಯುವ ಮೊದಲೇ
ಹೊಂಬಣ್ಣಕೆ ತಿರುಗುತಲಿವೆ ಹಾಲ್ದೆನೆಗಳು


ಮುಖ ಮಂಟಪದಿಂದ ಹರಿಯುತ್ತಿಲ್ಲ ನೀರು

ದೂಳು ಹಬ್ಬಿ,ನೆಲೆಯೂರುತಿದೆ ಸೊಳ್ಳೆ ಪರದೆಯ
ಮೇಲೆ
ಸಿಗದು ಇನ್ನೆಂದೂ ಮನೆಯ ದಾರಿ
ಪರದೇಸಿ ಉಯಿಲಕ್ಕಿಗೆ

ಅದೆಷ್ಟು ಕಾಲವಾಯ್ತು,ಬರಲೇ ಇಲ್ಲ ಮಳೆ
ಕೆಲಸವಿಲ್ಲದೆ ಬಿದ್ದುಕೊಂಡಿವೆ
ಕುಡುಗೋಲು,ಬುಟ್ಟಿ ಕಟ್ಟಿಗೆಯ ಮೆಟ್ಟಿಲ
ಬುಡದಲಿ
ಬೂದಿ ಬಡುಕ ಬೆಕ್ಕು ಒಲೆಯಲಿ

ಅನ್ನದ ಪಾತ್ರೆಯ ನೆನಸುತ್ತಾ ಕನಸುತ್ತಾ
ಎದೆ ಹಿಡಿದು ಕುಳಿತಿದ್ದಾರೆ
ನಿತ್ಯ ಕದನಕೆ ತಾತ್ಕಾಲಿಕ ವಿರಾಮ ನೀಡಿ
ಈ ಪುರಾತನ ಗಂಡ ಹೆಂಡಿರು
ಮುಂದೇನೋ ಎಂತೋ
ಯಾರಿಗೆ ಗೊತ್ತು ಈ ಎರೆಹುಳದ ಬಾಳು

ಕನಸಲಿ ಬೆಚ್ಚಿ ಬೊಗಳುವ ನಾಯಿ
ಮಣ್ಣಿನ ಪಾತ್ರೆ,ಮಣ್ಣಿನ ಬದುಕು
ನಿಶ್ಚಲ ರಾತ್ರಿಯಲಿ ಮೊರೆಯಿಡುವ
ಪ್ರಾರ್ಥನೆಗಳು
ಭರವಸೆಯ ಬೆಳಗಿಸುವ ಮಿಣುಕು ದೀಪಗಳು



ಕಲೆ: ಬಸವರಾಜ ಕಲೆಗಾರ

# ತಿರುಕ

ಬಹುಶಃ,ಈ ನಡು ಮಧ್ಯಾಹ್ನದ ಭಾರಿ ಅಡ್ಡಮಳೆಗೆ
ಹೃದಯದ ಮೇಲೊಂದು ಬರಸಿಡಿಲೆರಗುತ್ತದೆ
ನಂತರ ಅರಳಿ ಬರುವ ಕಾಮನಬಿಲ್ಲಿಗೂ
ಅಸಾಧ್ಯ ತಣ್ಣಗಾಗಿಸಲು ಅದರ ಕಣ್ಣೀರು

ಚಿರಕ್ ಪಿರಕ್ ಹವಾಯಿ ತೊಟ್ಟು
ಆ ದಾರಿಯುದ್ದಕ್ಕೂ ರಾಡಿ ಸಿಡಿಸಿ
ತನ್ನದೇ ಹೆಜ್ಜೆಗಳ ಎಣಿಸುತ್ತಾನವನು
ಜೊತೆಗೆ ಸಂಜೆಯ ಸುಳಿಗಾಳಿಗೆ
ಹುಚ್ಚೆದ್ದು ಕುಣಿವ ಜೊಂಡು ಹುಲ್ಲಿನ ತೆನೆಗಳನ್ನೂ

ತೊಯ್ದು ಎಲೆ,ವಟಗುಡುವ ಕಪ್ಪೆ
ಮಹಾಗನಿಯ ಕೊಂಬೆಗಳಿಗೆ ಜೋತುಬಿದ್ದ ಮಳೆ
ಹನಿ ಸಾಲು
ತಮ್ಮ ಗೂಡುಗಳಲ್ಲಿ ಚಿಲಿಪಿಲಿಗುಡುವ ಹಕ್ಕಿ
ಕೆಸರ ಗದ್ದೆಯಲ್ಲಾಡುವ ಮಕ್ಕಳ ತುಂಟ ದನಿ
ಹಳ್ಳಿ ಅಂಚಿನಲಿರುವ ಗುಡಿಗೆ ಭಜನೆ ಮಾಡಲು
ಮನೆಗೆ ಕರೆವ ತಾಯಂದಿರ ಜೋರು ಕೂಗು

ಅವನು ನಡೆಯುತ್ತಲೇ ಇರುತ್ತಾನೆ ನಿಲ್ಲದೆ
ದೇಹದ ತುಂಬ ಹಲವು ಗಾಯಗಳಿದ್ದರೂ
ಮನಸ್ಸಿನ ತುಂಬ ನೂರ ಚಿಂತೆಗಳಿದ್ದರೂ